# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 65 (646)
ಸದಸ್ಯರ ಹೆಸರು : ಶ್ರೀಮತಿ ಬಲ್ಕೀಸ್ ಬಾನು
ಉತ್ತರಿಸಬೇಕಾದ ದಿನಾಂಕ : 21.08.2026
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಅಪ್ಪರ್ ಭದ್ರಾ ಯೋಜನೆ ಪ್ರಾರಂಭವಾಗಿದ್ದು ಯಾವ ವರ್ಷ; ಸರ್ಕಾರದಿಂದ ಮೀಸಲಿಟ್ಟ ಅನುದಾನ ಎಷ್ಟು; ಬಾಕಿ ಉಳಿದಿರುವ ಕಾಮಗಾರಿ ವಿವರ ನೀಡುವುದು; | ಭದ್ರಾ ಮೇಲ್ದಂಡೆ ಯೋಜನೆಯನ್ನು 2007-08 ರಲ್ಲಿ ಪ್ರಾರಂಭಿಸಲಾಗಿರುತ್ತದೆ.<br><br>ಈ ಯೋಜನೆಯ ಮೂಲ ಅಂದಾಜು ರೂ.12,340 ಕೋಟಿ ಮೊತ್ತಕ್ಕೆ ಆದೇಶ ದಿ:06.03.2015ರಲ್ಲಿ ಅನುಮೋದನೆ ನೀಡಲಾಗಿದ್ದು, ರೂ.21,473.67 ಕೋಟಿಗಳ ಮೊತ್ತದ ಪುನರ್ ಪರಿಷ್ಕೃತ ಯೋಜನಾ ವರದಿಗೆ ಆದೇಶ ದಿನಾಂಕ:16.12.2020ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.<br><br>2026-27ನೇ ಸಾಲಿನಲ್ಲಿ ರೂ.1042.29 ಕೋಟಿಗಳ ಅನುದಾನ ಹಂಚಿಕೆ ಮಾಡಲಾಗಿರುತ್ತದೆ.<br><br>ಬಾಕಿ ಕಾಮಗಾರಿಗಳ ವಿವರಗಳನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ |
| ಆ) | ಅಪ್ಪರ್ ಭದ್ರಾ ಯೋಜನೆಗೆ ತುಂಗಾ ನದಿಯಿಂದ ಭದ್ರಾ ಡ್ಯಾಂಗೆ ಬಳಕೆಯಾಗುವ ನೀರಿನ ಪ್ರಮಾಣ ಎಷ್ಟು; ವರ್ಷದಲ್ಲಿ ಎಷ್ಟು ಪ್ರಮಾಣದ ನೀರನ್ನು ಹರಿಸಬೇಕಾಗುತ್ತದೆ; ಸದರಿ ಕಾಮಗಾರಿ ಯಾವ ಹಂತದಲ್ಲಿದೆ; (ವಿವರ ನೀಡುವುದು) | ಭದ್ರಾ ಮೇಲ್ದಂಡೆ ಯೋಜನೆಗೆ ಹಂತ-1ರ ಪ್ಯಾಕೇಜ್-1ರಡಿ ವಾರ್ಷಿಕ ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ ಒಟ್ಟು 17.40 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡಿ ಹರಿಸಬೇಕಿರುತ್ತದೆ.<br><br>ಈ ಯೋಜನಾ ಕಾಮಗಾರಿಗಳನ್ನು ರೂ.324.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲಾಗಿದ್ದು, ಕಾಮಗಾರಿಗಳು ವಿವಿಧ ಹಂತದಲ್ಲಿದ್ದು, ವಿವರ ಈ ಕೆಳಕಂಡಂತಿದೆ:<br><br>• 9.53ಕಿ.ಮೀ ಕಾಲುವೆಯ ಪೈಕಿ 9.305ಕಿ.ಮೀ ಕಾಲುವೆ ಅಗೆತ ಪ್ರಗತಿಯಲ್ಲಿದೆ.<br>• 6.90ಕಿ.ಮೀ ಲೈನಿಂಗ್ ಕಾಮಗಾರಿ ಪೂರ್ಣಗೊಂಡಿದ್ದು, ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br>• ಎರಡು ಪಂಪ್ ಹೌಸ್ ಕಾಮಗಾರಿಗಳು ಮುಕ್ತಾಯ ಹಂತದಲ್ಲಿದೆ.<br>• 2900ಮೀ ರೈಸಿಂಗ್ ಮೈನ್ ಅಳವಡಿಕೆ ಪೂರ್ಣಗೊಂಡಿದ್ದು, ಆಂಕರ್ ಬ್ಲಾಕ್ ಕೆಲಸಗಳು ಪ್ರಗತಿಯಲ್ಲಿರುತ್ತವೆ.<br>• ಎಲೆಕ್ಟ್ರಿಕಲ್ ಸಬ್‌ಸ್ಟೇಷನ್ -1 & 2 ಕಾಮಗಾರಿಗಳು ಅಂತಿಮ ಹಂತದಲ್ಲಿರುತ್ತದೆ.<br><br>ಈ ಮೇಲಿನ ಕಾಮಗಾರಿಯನ್ನು ನವೆಂಬರ್-2026ರ ಅಂತ್ಯಕ್ಕೆ ಪೂರ್ಣಗೊಳಿಸಲು ಕಾರ್ಯಕ್ರಮ ರೂಪಿಸಲಾಗಿದೆ. |
| ಇ) | ತುಂಗಾ ನದಿಯಿಂದ ಭದ್ರಾ ನದಿಗೆ ನೀರನ್ನು ಲಿಫ್ಟ್ ಮಾಡಲಾಗುತ್ತಿದೆ; ಇಲ್ಲದಿದ್ದರೆ, ಸೂಕ್ತ ಕಾರಣಗಳೇನು; ಸಮಸ್ಯೆ | ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 17.40 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡುವ (ಪ್ಯಾಕೇಜ್-1) ಕಾಮಗಾರಿಯು ಪ್ರಗತಿಯಲ್ಲಿದ್ದು, ಅನುಷ್ಠಾನದ ಸಂದರ್ಭದಲ್ಲಿ ಭೂಸ್ವಾಧೀನ, ಅರಣ್ಯ ಹಾಗೂ ವನ್ಯಜೀವಿ |

| | | |
|---|---|---|
| | ಪರಿಹರಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ತೀರುವಳಿ, ವಿದ್ಯುತ್ ಪ್ರಸರಣ ಮಾರ್ಗಕ್ಕೆ ಸಂಬಂಧಿಸಿದ ಅನುಮತಿಗಳು ಹಾಗೂ ಇತರೆ ಶಾಸನಬದ್ಧ ಅನುಮೋದನೆಗಳನ್ನು ಪಡೆಯುವಲ್ಲಿ ವಿಳಂಬ ಉಂಟಾಗಿರುತ್ತದೆ.<br><br>ಪ್ರಸ್ತುತ ಸದರಿ ಅಡಚಣೆಗಳನ್ನು ನಿವಾರಿಸಿ ಸಂಬಂಧಿಸಿದ ಇಲಾಖೆಗಳೊಂದಿಗೆ ನಿರಂತರ ಸಮನ್ವಯದೊಂದಿಗೆ ಅಗತ್ಯ ಅನುಮತಿಗಳನ್ನು ಪಡೆಯಲಾಗಿದ್ದು, ಬಾಕಿ ಕಾಮಗಾರಿಗಳನ್ನು ನವೆಂಬರ್-2026ರ ಅಂತ್ಯಕ್ಕೆ ಪೂರ್ಣಗೊಳಿಸಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು (Trial run) ಯೋಜಿಸಲಾಗಿದೆ. |
| ಈ) | ತುಂಗಾ ನದಿಯಿಂದ ಭದ್ರಾ ಡ್ಯಾಂಗೆ ನೀರನ್ನು ಹರಿಸಲು ಇನ್ನು ಎಷ್ಟು ಅನುದಾನ ಬೇಕಾಗಿರುತ್ತದೆ; ಯಾವ ಕಾಮಗಾರಿ ಬಾಕಿ ಇರುತ್ತದೆ; (ವಿವರ ನೀಡುವುದು) | ಭದ್ರಾ ಮೇಲ್ದಂಡೆ ಯೋಜನೆಯ ಹಂತ-1ರ ಪ್ಯಾಕೇಜ್-1 ಕಾಮಗಾರಿಯನ್ನು ಪೂರ್ಣಗೊಳಿಸಲು ರೂ.60.73 ಕೋಟಿಗಳು ಅವಶ್ಯಕವಾಗಿದ್ದು, ಬಾಕಿ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ;<br>• 2.63 ಕಿ.ಮೀ ಕಾಲುವೆಯ ಲೈನಿಂಗ್ ಕಾಮಗಾರಿ.<br>• 10 ಸಿ.ಡಿ ಕಾಮಗಾರಿಗಳು.<br>• Control and Relay ಪ್ಯಾನೆಲ್‌ಗಳ ಪೂರೈಕೆ ಮತ್ತು ಅಳವಡಿಕೆ.<br>• ರೈಸಿಂಗ್ ಮೇನ್-1 & 2 ರಲ್ಲಿ ಆಂಕರ್ ಬ್ಲಾಕ್ ಕೆಲಸಗಳು.<br>• ಎರಡು ಪಂಪ್ ಹೌಸ್ ಗಳ ಫಿನಿಷಿಂಗ್ ಕೆಲಸಗಳು.<br>• ಎಲೆಕ್ಟ್ರಿಕಲ್ ಸಬ್‌ಸ್ಟೇಷನ್-1 & 2ರ ಫಿನಿಷಿಂಗ್ ಕೆಲಸಗಳು.<br>• ವಿದ್ಯುತ ಪ್ರಸರಣಾ ಮಾರ್ಗದ 1.10ಕಿ.ಮೀ line stringing ಕೆಲಸಗಳು. |
| ಉ) | ಭದ್ರಾ ಜಲಾಶಯದಲ್ಲಿ ನೀರಿನ ಪ್ರಮಾಣ ಕಡಿಮೆ ಇರುವುದರಿಂದ ಸಾವಿರಾರು ಹೆಕ್ಟೇರ್‌ನಲ್ಲಿ ಭತ್ತ ಬೆಳೆಯನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸುತ್ತೋಲೆ ದಿ:03.07.2026ರನ್ವಯ ಜಲಾಶಯಗಳಲ್ಲಿನ ನೀರನ್ನು ಕಡ್ಡಾಯವಾಗಿ ಕುಡಿಯುವ ನೀರಿಗೆ ಮಾತ್ರ ಕಾಯ್ದಿರಿಸಬೇಕಾಗಿರುತ್ತದೆ.<br><br>ದಿನಾಂಕ:08.08.2026ರಂದು ರಚಿಸಲಾದ ನೀರಾವರಿ ಸಲಹಾ ಸಮಿತಿಯು, ಜಲಾಶಯದಿಂದ ಕಾಲುವೆಗಳಿಗೆ ನೀರು ಹರಿಸುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತದೆ. ಅದರಂತೆ, ಇಲಾಖಾ ಇಂಜಿನಿಯರ್ ಗಳು ಕ್ರಮ ತೆಗೆದುಕೊಳ್ಳುತ್ತಾರೆ. |
| ಊ) | ತುಂಗಾ ನದಿಯಿಂದ ಭದ್ರಾ ಡ್ಯಾಂಗೆ ನೀರನ್ನು ಹರಿಸುವುದರಿಂದ ರೈತರಿಗೆ ಅನುಕೂಲವಾಗಲು ಯಾವ ಕ್ರಮಗಳನ್ನು ಅನುಸರಿಸಲಾಗಿದೆ? | ಭದ್ರಾ ಜಲಾಶಯದಿಂದ ಭದ್ರಾ ಮೇಲ್ದಂಡೆ ಯೋಜನೆಗೆ ಒಟ್ಟಾರೆ 29.90 ಟಿ.ಎಂ.ಸಿ ನೀರನ್ನು ಬಳಸಿಕೊಂಡು ಚಿತ್ರದುರ್ಗ ಹಾಗೂ ತುಮಕೂರು ಶಾಖಾ ಕಾಲುವೆಗಳ ಮೂಲಕ ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಹಾಗೂ ದಾವಣಗೆರೆ ಜಿಲ್ಲೆಗಳಲ್ಲಿ 2,25,515 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಹಾಗೂ 367 ಕೆರೆಗಳನ್ನು ಭರ್ತಿ ಮಾಡುವುದು ಈ ಯೋಜನೆಯ ಉದ್ದೇಶವಾಗಿದ್ದು, ಯೋಜನೆ ಪೂರ್ಣಗೊಂಡರೆ 2,25,515 ಹೆಕ್ಟೇರ್ ಪ್ರದೇಶದ ರೈತರಿಗೆ ಅನುಕೂಲವಾಗುತ್ತದೆ. |

**ಸಂಖ್ಯೆ: ಜಸಂಇ 101 WLA 2026**

(ಎನ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 65 (646)ಕ್ಕೆ ಅನುಬಂಧ

**ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳ ಪ್ರಸ್ತುತ ಹಂತ:** (Present Status)

**ಹಂತ-1 : ಏತ ಕಾಮಗಾರಿಗಳು:-**

- ತುಂಗಾ ನದಿಯಿಂದ ಭದ್ರಾ ಜಲಾಶಯಕ್ಕೆ 17.40 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡುವ ರೂ.324.00 ಕೋಟಿಗಳ ಮೊತ್ತದ (ಪ್ಯಾಕೇಜ್-1) ಕಾಮಗಾರಿಯು ಪ್ರಗತಿಯಲ್ಲಿದ್ದು, ನವೆಂಬರ್-2026ರ ಅಂತ್ಯಕ್ಕೆ ಪೂರ್ಣಗೊಳಿಸಿ ಪ್ರಾಯೋಗಿಕವಾಗಿ ಚಾಲನೆಗೊಳಿಸಲು (Trial run) ಯೋಜಿಸಲಾಗಿದೆ.

- ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದವರೆಗೆ 29.90 ಟಿ.ಎಂ.ಸಿ. ನೀರನ್ನು ಲಿಫ್ಟ್ ಮಾಡುವ ರೂ.1032.00 ಕೋಟಿಗಳ ಮೊತ್ತದ (ಪ್ಯಾಕೇಜ್-2) ಮತ್ತು ಅಜ್ಜಂಪುರ ಸುರಂಗ ನಿರ್ಮಾಣ ಮಾಡುವ ರೂ.223.96 ಕೋಟಿಗಳ ಮೊತ್ತದ (ಪ್ಯಾಕೇಜ್-3) ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ಭದ್ರಾ ಜಲಾಶಯದಿಂದ ಅಜ್ಜಂಪುರ ಸುರಂಗದ ಮೂಲಕ 2019-20 ಸಾಲಿನಿಂದ ಇಲ್ಲಿಯವರೆಗೂ ಸರ್ಕಾರದ ಆದೇಶಗಳನ್ವಯ ವಾಣಿವಿಲಾಸ ಸಾಗರಕ್ಕೆ, ತರೀಕರೆ ಏತ ನೀರಾವರಿ ಯೋಜನೆಗೆ ಭದ್ರಾ ಜಲಾಶಯದಿಂದ ನೀರನ್ನು ಹರಿಸಲಾಗಿರುತ್ತದೆ.

**ಹಂತ-2: ಕಾಲುವೆ, ಕೆರೆ ತುಂಬಿಸುವ ಫೀಡರ್ ಮತ್ತು ಸೂಕ್ಷ್ಮ ನೀರಾವರಿ ಕಲ್ಪಿಸುವ ಕಾಮಗಾರಿಗಳು:-**

### ಕಾಲುವೆ ಕಾಮಗಾರಿಗಳು

| Project Details | Packages / Works (Nos) | Tanks (Nos) | Area under Micro irrigation (Drip) | ಮೊತ್ತ (ರೂ.ಕೋಟಿಗಳಲ್ಲಿ) | Remarks |
|---|---|---|---|---|---|
| ತರೀಕೆರೆ ಏತ ನೀರಾವರಿ ಯೋಜನೆ | 2 | Out of 79 tanks 76 are filled | Out of 20,150 ha, 12,000 Ha is irrigated | ರೂ.812.04 | ಮುಕ್ತಾಯ ಹಂತದಲ್ಲಿದೆ |
| ಚಿತ್ರದುರ್ಗ ಶಾಖಾ ಕಾಲುವೆ (0.00 to 134.597 KM) | 12 | - | - | ರೂ.1816.21 | 129.297 KM ಕಾಮಗಾರಿಗಳು ಪೂರ್ಣಗೊಂಡಿದೆ.<br>5.3 KM ಕಾಮಗಾರಿಗಳು ಪ್ರಗತಿಯಲ್ಲಿದೆ.<br>**ವಿವರಗಳು ಈ ಕೆಳಕಂಡಂತಿದೆ:**<br>Package-4- 3.65 KM<br>Package-11-0.820 KM (Lining works)<br>0.830 KM (Gonur Acqueduct)<br>ನವೆಂಬರ್ 2026ರ ಅಂತ್ಯಕ್ಕೆ ಪೂರ್ಣಗೊಳಿಸಿ, Chainage- 114.209 KMರ ವರೆಗೆ ನೀರು ಹರಿಸಿ, Trial run ಮಾಡಲು ಉದ್ದೇಶಿಸಲಾಗಿದೆ. |
| ತುಮಕೂರು ಶಾಖಾ ಕಾಲುವೆ (0.00 to 159.684 KM) | 9 | - | - | ರೂ.1142.82 | 103.72 KM ಕಾಲುವೆ ಅಗೆತ ಹಾಗೂ 53.522 KM Lining ಪೂರ್ಣಗೊಂಡಿದೆ.<br>ಬಾಕಿ ಇರುವ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿದ್ದು, ಮಾರ್ಚ್ 2028ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ. |

## 4. ಸೂಕ್ಷ್ಮ ನೀರಾವರಿ:

| ಕಾಲುವೆಯ ವಿವರ | ಸೂಕ್ಷ್ಮ ನೀರಾವರಿ ಪ್ರದೇಶ (ಹೆಕ್ಟೇರ್) | ತಾಲ್ಲೂಕುಗಳ ವಿವರ | ಪ್ಯಾಕೇಜ್ ಗಳ ವಿವರ | ಮೊತ್ತ (ರೂ. ಕೋಟಿಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|
| ಚಿತ್ರದುರ್ಗ ಶಾಖಾ ಕಾಲುವೆ | 1,07,265 | ತರೀಕೆರೆ, ಕಡೂರು, ಹೊಸದುರ್ಗ, ಹೊಳಲ್ಕೆರೆ, ಹಿರಿಯೂರು, ಚಿತ್ರದುರ್ಗ ಹಾಗೂ ಚಳ್ಳಕೆರೆ | 9 | ರೂ.5,165.05 | |
| ತುಮಕೂರು ಶಾಖಾ ಕಾಲುವೆ | 84,900 | ತರೀಕೆರೆ, ಕಡೂರು, ಹೊಸದುರ್ಗ, ಹಿರಿಯೂರು, ಚಿಕ್ಕನಾಯಕನಹಳ್ಳಿ, ಮತ್ತು ಶಿರಾ | 9 | ರೂ.3,806.27 | ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ |
| ಜಗಳೂರು ಶಾಖಾ ಕಾಲುವೆ | 13,200 | ಚಿತ್ರದುರ್ಗ ಮತ್ತು ಜಗಳೂರು | 2 (09 ಕೆರೆ ತುಂಬಿಸುವುದು) | ರೂ.1568.91 | |

## 5. ಕೆರೆ ತುಂಬಿಸುವ ಕಾಮಗಾರಿಗಳು:

| ಕಾಲುವೆಯ ವಿವರ | ಕೆರೆಗಳ ಸಂಖ್ಯೆ | ತಾಲ್ಲೂಕುಗಳ ವಿವರ | ಪ್ಯಾಕೇಜ್‌ಗಳ ವಿವರ | ಮೊತ್ತ (ರೂ. ಕೋಟಿಗಳಲ್ಲಿ) | ಪ್ರಸ್ತುತ ಹಂತ |
|---|---|---|---|---|---|
| ಚಿತ್ರದುರ್ಗ ಶಾಖಾ ಕಾಲುವೆ | 21 | ಹೊಳಲ್ಕೆರೆ | 4 | ರೂ.243.34 | ಮುಕ್ತಾಯ ಹಂತದಲ್ಲಿದೆ |
| | 51 | ಚಳ್ಳಕೆರೆ | 3 | ರೂ.741.30 | ಪ್ರಗತಿಯಲ್ಲಿದೆ |
| | 20 | ಮೊಳಕಾಲ್ಮೂರು | | | |
| | 30 | ಪಾವಗಡ | - | ರೂ.712.58 | ಪ್ರಗತಿಯಲ್ಲಿದೆ |
| ತುಮಕೂರು ಶಾಖಾ ಕಾಲುವೆ | 19 | ಚಿಕ್ಕನಾಯಕನಹಳ್ಳಿ | - | ರೂ.73.48 | ಪ್ರಗತಿಯಲ್ಲಿದೆ |
| | 41 | ಶಿರಾ-ಹಿರಿಯೂರು | - | ರೂ.1215.21 | ಪ್ರಗತಿಯಲ್ಲಿದೆ |

ಸದರಿ ಯೋಜನೆಗಾಗಿ ಜೂನ್-2026ರ ಅಂತ್ಯಕ್ಕೆ ಒಟ್ಟಾರೆ ಸಂಚಿತ ರೂ.12,187.31 ಕೋಟಿಗಳ ಆರ್ಥಿಕ ಪ್ರಗತಿ ಸಾಧಿಸಲಾಗಿದೆ.

******